**ಪಿ.ಡಬ್ಲ್ಯು-01**

**ಸಾಕ್ಷಿಯನ್ನು ದಿನಾಂಕಃ 30.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಟಿ.ಆರ್, ವಕೀಲರಿಂದಃ**

ನಾನು 30-40 ವರ್ಷಗಳಿಂದಲೂ ಚಿಕ್ಕಯ್ಯನಛತ್ರ ಗ್ರಾಮದಲ್ಲಿ ವಾಸವಿರುತ್ತೇನೆ ಎಂದರೆ ಸರಿ. ಸದರಿ ಗ್ರಾಮ ನಂಜನಗೂಡು ತಾಲ್ಲೂಕಿನ ವ್ಯಾಪ್ತಿಯಲ್ಲಿರುತ್ತದೆ. ಆರೋಪಿ ಅನುಷಾ ಹುಣಸೂರು ಪಟ್ಟಣದಲ್ಲಿ ನೆಲೆಸಿರುತ್ತಾರೆ ಎಂದರೆ ಸರಿ. ಆರೋಪಿ ನನ್ನ ಸಂಬಂಧಿಕರಲ್ಲ. ನನ್ನ ಪತಿ ಮೃತಪಟ್ಟು 30 ವರ್ಷಗಳಾಗಿರುತ್ತವೆ. ನನಗೆ 3 ಜನ ಹೆಣ್ಣು ಮಕ್ಕಳಿರುತ್ತಾರೆ. ನಾನೇ ನನ್ನ ಮಕ್ಕಳನ್ನು ಸಾಕಿ-ಸಲುಹಿ ಬೆಳೆಸಿರುತ್ತೇನೆ ಎಂದರೆ ಸರಿ. ಕಾರ್ಖಾನೆಗೆ ನನ್ನ ಗಂಡ ಕೆಲಸಕ್ಕೆ ಹೋಗುತ್ತಿದ್ದು, ನನ್ನ ಗಂಡ ಮೃತಪಟ್ಟಿದ್ದರಿಂದ ನನಗೆ ಕೆಲಸ ಕೊಟ್ಟಿದ್ದು, ನಾನು ಕೆಲಸಕ್ಕೆ ಹೋಗುತ್ತಿದ್ದೆ, ನಂತರ ಸದರಿ ಕಾರ್ಖಾನೆ ಮುಚ್ಚಿಹೋಗಿರುತ್ತದೆ. ನಾನು ಕೆಲಸಕ್ಕೆ ಹೋಗುತ್ತಿದ್ದ ಕಾರ್ಖಾನೆ ಮುಚ್ಚಿ ಸುಮಾರು 20 ವರ್ಷಗಳಾಗಿರುತ್ತವೆ. ನಾನು ಬಡತನ ರೇಖೆಗಿಂತ ಕೆಳಗಿನ ಪಡಿತರ ಚೀಟಿ ಹೊಂದಿರುತ್ತೇನೆ.

ನಾನು ಆರೋಪಿಯ ವಿರುದ್ಧ ರೂ.6 ಲಕ್ಷಕ್ಕಾಗಿ ಚೆಕ್ ಬೌನ್ಸ್ ಪ್ರಕರಣ ಹಾಕಿರುತ್ತೇನೆ. ನಾನು ಆರೋಪಿಗೆ ಹಣ ಕೊಟ್ಟು ಸುಮಾರು 5 ವರ್ಷಗಳಿಗಿಂತ ಜಾಸ್ತಿಯಾಗಿರುತ್ತದೆ, ಆದರೆ ದಿನಾಂಕ ನೆನಪಿಲ್ಲ. ನಾನು ಹಣ ಕೊಟ್ಟ ದಿವಸ ಚೆಕ್ಕನ್ನು ಕೊಟ್ಟಿರುವುದಿಲ್ಲ, ಆದರೆ ಇನ್ನೊಂದು ದಿವಸ ಹಣ ಕೇಳಲು ಹೋದಾಗ ಚೆಕ್ ಕೊಟ್ಟಿರುತ್ತಾರೆ. ನಾನು ಆರೋಪಿಗೆ ರೂ. 6 ಲಕ್ಷ ಹಣ ಕೊಟ್ಟಿರುತ್ತೇನೆ. ನನ್ನ ಬಳಿ 6 ಲಕ್ಷ ಹಣ ಇತ್ತು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಜಮೀನಿನಿಂದ ನನಗೆ ರೂ.12 ಲಕ್ಷ ಹಣ ಬಂದಿದ್ದು, ಅದರ ಬಗ್ಗೆ ನನ್ನ ಬಳಿ ದಾಖಲೆ ಇರುತ್ತದೆ. ಚೆಕ್ ನ ದಿನಾಂಕ ನನಗೆ ಗೊತ್ತಿಲ್ಲ. ಚೆಕ್ಕನ್ನು ಯಾವ ದಿನಾಂಕದಂದು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆಂದು ನನಗೆ ಗೊತ್ತಿಲ್ಲ, ಆದರೆ ಅವರು ಕೊಟ್ಟಾಗ ಹಾಕಿರುತ್ತೇನೆ. ನಾನು

ಬ್ಯಾಂಕ್ ಗೆ ಚೆಕ್ ನ್ನು ಹಾಜರುಪಡಿಸಿದ ನಂತರ ಬ್ಯಾಂಕ್ ನವರು ನೀಡಿರುವ ಹಿಂಬರಹವನ್ನು ಓದಿಸಿ ತಿಳಿದುಕೊಂಡಿರುತ್ತೀರಾ ಎಂದರೆ ನನಗೆ ಗೊತ್ತಿಲ್ಲ, ಆದರೆ ಹಣ ಇರುವುದಿಲ್ಲವೆಂದು ಬಂದ ನಂತರ ನಾನು ಪ್ರಕರಣ ದಾಖಲಿಸಿರುತ್ತೇನೆ. ಹುಣಸೂರಿನಲ್ಲಿ ಯಾವಾಗಲಾದರೂ ವಾಸವಿದ್ದೀರಾ ಎಂದರೆ ನನ್ನ ಮಗಳನ್ನು ಹುಣಸೂರಿಗೆ ಕೊಟ್ಟು ಮದುವೆ ಮಾಡಿರುತ್ತೇನೆ. ಆರೋಪಿಯನ್ನು ಮೊದಲ ಬಾರಿಗೆ ಯಾವಾಗ ನೋಡಿರುತ್ತೀರಾ ಎಂದರೆ ಆರೋಪಿ ನನ್ನ ಮಗಳ ಮನೆಗೆ ಬಂದು ಊಟ ತಿಂಡಿ ಮಾಡುತ್ತಿದ್ದರು ಮತ್ತು ನನ್ನ ಮಗಳು ಕೂಡ ಅವರ ಮನೆಗೆ ಹೋಗಿ ಊಟ ತಿಂಡಿ ಮಾಡುತ್ತಿದ್ದರು, ಆ ಪರಿಚಯದಿಂದ ಆರೋಪಿಗೆ ಹಣ ಕೊಟ್ಟಿರುತ್ತೇನೆ. ಹುಣಸೂರಿನಲ್ಲಿರುವ ನನ್ನ ಮಗಳು ಲೇವಾದೇವಿ ವ್ಯವಹಾರ ಮತ್ತು ಚೀಟಿ ವ್ಯವಹಾರ ನಡೆಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಳಿಯ ಆಟೋ ಓಡಿಸುತ್ತಾರೆ ಎಂದರೆ ಸರಿ. ನನ್ನ ಮಗಳು ನನ್ನ ಬಳಿ ಹಣ ಕೇಳಿರುತ್ತಾರೆ ಎಂದರೆ ನನ್ನ ಮಗಳು ಕೂಡ ಕೇಳಿರುತ್ತಾಳೆ ಮತ್ತು ಆರೋಪಿಯು ಕೂಡ ಹಣ ಕೇಳಿರುತ್ತಾರೆ. ನಾನೇ ಹುಣಸೂರಿಗೆ ಹೋಗಿ ಆರೋಪಿಗೆ ಹಣ ಕೊಟ್ಟಿರುತ್ತೇನೆ. ನಾನು ಆರೋಪಿಗೆ ಚೆಕ್ ಮೂಲಕ ಹಣ ಕೊಡಲು ಯಾವುದೇ ತೊಂದರೆ ಇರಲಿಲ್ಲ. ಆರೋಪಿ ಅನುಷಾರವರ ಗಂಡನ ಹೆಸರು ಸತ್ಯನಾರಾಯಣ ರಾವ್ ಎಂದರೆ ಸರಿ. ಆರೋಪಿಯ ಗಂಡನ ವಿರುದ್ಧವೂ ಕೂಡ ಚೆಕ್ ಬೌನ್ಸ್ ಪ್ರಕರಣ i.e., ಸಿ.ಸಿ. 8953/2022 ರಂತೆ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣ ಈ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ ಎಂದರೆ ಸರಿ. ಈಗ ನನಗೆ ತೋರಿಸುತ್ತಿರುವ ದಾಖಲೆ ಆರೋಪಿಯ ಗಂಡನ ಮೇಲೆ ನಾನು ದಾಖಲಿಸಿರುವ ದೂರಿನ ದೃಢೀಕೃತ ಪ್ರತಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸಿ.ಸಿ.8953/2022 ರ ದೂರಿನ ದೃಢೀಕರಣ ಪ್ರತಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ಈಗ ನನಗೆ

ತೋರಿಸುತ್ತಿರುವ ಚೆಕ್ ನಂ.213783 ರ ಚೆಕ್ ನ ದೃಢೀಕೃತ ಪ್ರತಿ, ಲೀಗಲ್ ನೋಟಿಸ್ ನ ದೃಢೀಕೃತ ಪ್ರತಿ, ಅಂಚೆ ಸ್ವೀಕೃತಿಯ ದೃಢೀಕೃತ ಪ್ರತಿ, ಪ್ರತ್ಯುತ್ತರ ನೋಟಿಸಿನ ದೃಢೀಕೃತ ಪ್ರತಿಗಳನ್ನು ನಾನು ಸಿ.ಸಿ.8953/2022 ರಲ್ಲಿ ಸಲ್ಲಿಸಿರುವ ದೃಢೀಕೃತ ದಾಖಲೆಗಳಾಗಿರುತ್ತವೆ ಎಂದರೆ ಸರಿ. ಸಾಕ್ಷಿಯು ಈ ಮೇಲಿನ ದಾಖಲೆಗಳನ್ನು ನೋಡಿ ಒಪ್ಪಿ ಗುರುತಿಸಿದ್ದರಿಂದ, ಅವುಗಳನ್ನು ಕ್ರಮವಾಗಿ **ನಿಡಿ-2** ರಿಂದ **5** ಎಂದು ಗುರುತಿಸಲಾಯಿತು. ಹುಣಸೂರಿಗೆ ಮದುವೆ ಮಾಡಿಕೊಟ್ಟಿರುವ ನನ್ನ ಮಗಳ ಹೆಸರು ಮಮತಾ ಎಂದರೆ ಸರಿ. ನನ್ನ ಮಗಳು ಲೇವಾದೇವಿ ಮತ್ತು ಚೀಟಿ ವ್ಯವಹಾರ ನಡೆಸುತ್ತಿದ್ದರಿಂದ ಅನೇಕ ಜನರಿಗೆ ಹಣ ಕೊಡಬೇಕಾಗಿದ್ದು, ಈ ವಿಚಾರವಾಗಿ ನನ್ನ ಮಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ನನ್ನ ಮಗಳು ಚಿಕ್ಕಯ್ಯನಛತ್ರ ಗ್ರಾಮದಲ್ಲಿ ನನ್ನ ಜೊತೆಯಲ್ಲಿಯೇ ವಾಸವಿರುತ್ತಾರೆ ಎಂದರೆ ಸರಿಯಲ್ಲ, ಆದರೆ ಚಿಕ್ಕಯ್ಯನಛತ್ರ ಗ್ರಾಮದಲ್ಲಿ ಬೇರೆ ಮನೆಯಲ್ಲಿ ವಾಸವಿರುತ್ತಾರೆ.

ಆರೋಪಿ ಅನುಷಾರವರು ನನ್ನ ಮಗಳ ಬಳಿ ರೂ.1,00,000/-ದ ಚೀಟಿ ಹಾಕಿದ್ದು, ಸದರಿ ಚೀಟಿ ವ್ಯವಹಾರದ ಭದ್ರತೆಗಾಗಿ ನನ್ನ ಮಗಳು ಆರೋಪಿಯಿಂದ ವಿವಾದಿತ ಚೆಕ್ಕನ್ನು ಪಡೆದುಕೊಂಡಿದ್ದು, ನನ್ನ ಮಗಳು ಹುಣಸೂರಿನಿಂದ ಚಿಕ್ಕಯ್ಯನಛತ್ರ ಗ್ರಾಮಕ್ಕೆ ಬಂದು ನೆಲೆಸಿದ ನಂತರ ನನ್ನ ಮಗಳು ನನ್ನ ಜೊತೆ ಸೇರಿ ದುರ್ಲಾಭ ಪಡೆಯುವ ಉದ್ದೇಶದಿಂದ ನನ್ನ ಮೂಲಕ ಸದರಿ ವಿವಾದಿತ ಚೆಕ್ಕನ್ನು ಉಪಯೋಗಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಕೊಟ್ಟಿರುತ್ತೇನೆಂದು ಹೇಳಿರುವ ಹಣ ನನ್ನ ಬಳಿ ಇರಲಿಲ್ಲ ಮತ್ತು ನನಗೆ ಸದರಿ ಹಣ ಕೊಡಲು ಆರ್ಥಿಕ ಸಾಮರ್ಥ್ಯವಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಯಾವುದೇ ಹಣವನ್ನು ಸಾಲವಾಗಿ

ಪಡೆದಿಲ್ಲವಾದ್ದರಿಂದ ಆರೋಪಿ ನನಗೆ ಯಾವುದೇ ಹಣ ಕೊಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣವನ್ನು ಸಾಲವಾಗಿ ಕೊಟ್ಟಿಲ್ಲವಾದ್ದರಿಂದ ನಾನು ಸಲ್ಲಿಸಿರುವ ದೂರು ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ನಂಜನಗೂಡು.**